

# ಸಂಸಾರವೆಂಬ ಟೆಂಟು

ಸಂಸಾರದೊಳಗಿನ ಕಿಚ್ಚು ಸಂಸಾರವನ್ನೇ ಸುಡುವ ರೂಪಕವನ್ನು ಟೆಂಟ್ ಮೂಲಕ ಕಟ್ಟಿಕೊಡುವ ಕಿರುಚಿತ್ರ ‘ಟೆಂಟ್’.

■ ಗೌರಿ

ಗಂಡ, ಹೆಂಡತಿ, ತೊದಲು ನುಡಿಯಿಂದ ಈಗಷ್ಟೇ ಸ್ಪಷ್ಟ ಮಾತಿಗೆ ದಾಟಿಕೊಳ್ಳುತ್ತಿರುವ ಒಂದು ಮುದ್ದಾದ ಗಂಡು ಮಗು ಮತ್ತು ಹದಿವಯದ ಮಾಯಾಲೋಕಕ್ಕೆ ಅಡಿಯಿಡುತ್ತಿರುವ ಮಗಳು... ಆಹಾ! ಪುಟ್ಟ ಸುಂದರ ಸಂಸಾರದ ಚಿತ್ರವೊಂದು ಮನಸಲ್ಲಿ ಮೂಡಿನಿಲ್ಲುತ್ತದಲ್ಲವೇ? ಸ್ವರ್ಗಕ್ಕೆ ಕಿಚ್ಚು ಹಚ್ಚುವ ಚಿತ್ರವದು. ಆದರೆ ಕೆಲವೊಮ್ಮೆ, ಸ್ವರ್ಗಕ್ಕಲ್ಲ, ಸಂಸಾರದ ಗುಡಾರಕ್ಕೇ ಕಿಚ್ಚು ಹತ್ತಿಕೊಳ್ಳುತ್ತದೆ.

‘ಟೆಂಟ್’ ಕಿರುಚಿತ್ರವೂ ಇಂಥದೊಂದು ಪುಟ್ಟ ಸಂಸಾರ ಕಾಡಿನೊಳಗೆ ಗುಡ್ಡ ಹತ್ತುತ್ತ ನಡೆಯುವ ಚಂದದ ಚಿತ್ರದೊಂದಿಗೇ ಆರಂಭವಾಗುತ್ತದೆ. ಅವರು ನಾಡಿನಿಂದ ದೂರ, ಕಾಡಿನಲ್ಲಿ ಕ್ಯಾಂಪ್ ಹಾಕಿ ಸಮಯ ಕಳೆಯಲು ಬಂದಿದ್ದಾರೆ. ಅಲ್ಲಿನ ತಾಜಾ ಹವೆ, ಸುತ್ತಲಿನ ಹಸಿರು, ಸರೋವರದ ತಿಳಿನೀರು ಎಲ್ಲವೂ ತಮ್ಮನ್ನು ಇನ್ನಷ್ಟು ಹತ್ತಿರಕ್ಕೆ ಬೆಸೆಯುತ್ತದೆ ಎಂಬ ಭರವಸೆಯಲ್ಲಿ ಬಂದಿದ್ದಾರೆ.

ಆದರೆ ಆಗುವುದೇ ಬೇರೆ.

ಖುಷಿಯ ಗಳಿಗೆ ಕಳೆಯಲು ಬಂದ ಕುಟುಂಬ ಛಿದ್ರ ಮನಸ್ಸಿನೊಂದಿಗೆ ಅರ್ಧದಲ್ಲೇ ಹೊರಟು ಹೋಗುತ್ತದೆ. ಸಂಸಾರವೆಂಬ ಹೂಚಿತ್ರದ ಪರದೆಯ ಒಳಗಿರುವ ಮುಳ್ಳುಗಳನ್ನು ಕಾಣಿಸುವ ಈ ಕಿರುಚಿತ್ರ ಅದಕ್ಕಾಗಿ ‘ಟೆಂಟ್’ ಅನ್ನು ಬಳಸಿಕೊಳ್ಳುವ ರೀತಿ ಕುತೂಹಲಕಾರಿಯಾಗಿದೆ.

ಬೆಟ್ಟದಲ್ಲಿ ಟೆಂಟ್ ಹಾಕಿಕೊಂಡು ವೇಳೆ ಕಳೆಯುವುದು ಆ ಕುಟುಂಬದ ಯೋಜನೆ. ಬಂದು ತಲುಪಿದಾಗಲೇ ಮಗಳಿಗೆ ಅಲ್ಲಿ 4ಜಿ ಸಿಗ್ನಲ್ ಇಲ್ಲ ಎಂಬ ನಿರಾಸೆ ಸ್ಫೋಟವಾಗುತ್ತದೆ. ಟೆಂಟ್ ಕಟ್ಟುವುದು ಹೇಗೆ ಎನ್ನುವುದು ಅಲ್ಲಿ ಯಾರಿಗೂ ಗೊತ್ತಿಲ್ಲ. ಸಾಮಗ್ರಿಗಳನ್ನು ತೆಗೆದುಕೊಂಡು ಗಂಡ ಹೆಂಡತಿ ಟೆಂಟ್ ಕಟ್ಟುವ ಪ್ರಯತ್ನದಲ್ಲಿ ತೊಡಗುತ್ತಾರೆ. ಆದರೆ ಅದು ಸರಿಹೋಗುತ್ತಲೇ ಇಲ್ಲ. ಆ ಪ್ರಯತ್ನದಲ್ಲಿಯೇ ಹುಟ್ಟಿಕೊಳ್ಳುವ ಸಣ್ಣ ಸಣ್ಣ ಘರ್ಷಣೆಗಳಲ್ಲಿ ಅವರ ನಡುವಿನ ಭಿನ್ನಾಭಿಪ್ರಾಯ, ಅಪನಂಬಿಕೆ ಎಲ್ಲವೂ ಹೊರಬೀಳುತ್ತ ಹೋಗುತ್ತದೆ.



ಹೆಸರು: ಟೆಂಟ್
ನಿರ್ದೇಶನ: ರೆಬೆಕಾ ಫಿಜೆಂಬಾವ್
ನಿರ್ಮಾಣ: ಫ್ರೋಡೇ ಸಬ್‌ಸ್ಟಾಂಗ್
ಛಾಯಾಗ್ರಹಣ: ಮಾರ್ಟೆ ವ್ರೂಲ್ಡ್
ತಾರಾಗಣ: ಸಿಗಾರ್ಡ್ ಮೊರೆ, ಕ್ರಿಸ್ಟಿಯನ್ ನಿಕೋಲಸ್, ಎರಿಕಾ

ಅಪ್ಪ ಅಮ್ಮನ ಮಧ್ಯದ ಭಿನ್ನಾಭಿಪ್ರಾಯವನ್ನು ಜಾಣತನದಿಂದ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಮಗಳು, ಅಮ್ಮನ ಕಣ್ತಪ್ಪಿಸಿ ಸಿಗರೇಟು ಸೇದುತ್ತಾಳೆ. ಆದರೆ ಹೆಂಡತಿಯ ಕಣ್ಣಿಗೆ ಅದು ಗಂಡನೇ ಸೇದಿದ ಸಿಗರೇಟು ಎಂಬ ಅನುಮಾನ. ಜಗಳದ ಕಿಡಿ ಹೊತ್ತಿಕೊಳ್ಳಲು ಅಷ್ಟು ಸಾಕು. ಸಿಗರೇಟಿನ ತುದಿಯ ಕಿಡಿ ಅವರ ಮಧ್ಯವಷ್ಟೇ ಅಲ್ಲ, ಟೆಂಟಿನ ಬುಡಕ್ಕೂ ಬೆಂಕಿ ಹಚ್ಚುತ್ತದೆ. ಅಂತೂ ಇಂತೂ ಕಟ್ಟಿನಿಲ್ಲಿಸಿದ್ದ ಟೆಂಟು ಕಣ್ಣೆದುರೇ ಭಗಭಗ ಉರಿದುಹೋಗುತ್ತದೆ.

ರೂಪಕವನ್ನು ಎಲ್ಲಿಯೂ ಕಥನದ ಸಾವಯವ ವಾತಾವರಣದಿಂದ ಬೇರೆಯಾಗಿ ಕಾಣಿಸದ ಹಾಗೆ ಕಟ್ಟುವಲ್ಲಿ ಈ ಕಿರುಚಿತ್ರದ ಯಶಸ್ಸಿದೆ. ಇಲ್ಲಿ ಟೆಂಟು ಬರೀ ಟೆಂಟಲ್ಲ, ಅವರ ಕುಟುಂಬದ ಪ್ರತೀಕ ಎಂಬುದು ತುಸು ವಾಚ್ಯವೆನಿಸುವ ಹಾಗೆಯೇ ನೋಡುಗನ ಮನಸ್ಸಿಗೆ ಇಳಿಯುತ್ತದೆ. ಆದರೆ ಅದು ಕಥೆಗಿಂತ ಮುಂದೆ ಬಂದು ನಿಲ್ಲುವುದಿಲ್ಲ ಎಂಬುದು ಇದರ ಹೆಚ್ಚುಗಾರಿಕೆ.

ಎಷ್ಟೋ ಹೊತ್ತು ಕಷ್ಟಪಟ್ಟು ಕಟ್ಟಿದ ಟೆಂಟೊಂದು ಕ್ಷಣಾರ್ಧದಲ್ಲಿ ಭಗಭಗ ಉರಿದು ಬೂದಿಯಾಗುವ ಹಾಗೆ ಉರಿದುಹೋದ, ಈಗಲೂ ಉರಿಯುತ್ತಿರುವ ಸಂಸಾರಗಳು ನಮ್ಮ ಸುತ್ತಲೂ ಎಷ್ಟೊಂದು ಇವೆಯಲ್ಲವೇ? ಹಾಗಾಗಿಯೇ ನಾರ್ವೆ ದೇಶದಲ್ಲಿ ತಯಾರಾದ ಈ ಕಿರುಚಿತ್ರ ಕುಟುಂಬದ ಕಥೆಯಾಗಿಯೂ, ಟೆಂಟಿನ ರೂಪಕ ಕಟ್ಟುವ ರೀತಿಯಿಂದಲೂ ಇಷ್ಟವಾಗುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3f1Iqbt ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.